

ಅತ್ತಲಾ, ಚಾಟಿನಿಂಗನು ಸುಮಾರು ಹೊತ್ತಿನಿಂದ ರಾಮಾಜೋಯಿಸರ ಈ ಬೈಗುಳದ ರಾಗತಾಳಗಳು ಏನಾದರೂ ಬದಲಾದಾವೆಂದು ಕಾದೂ ಕಾದೂ ಬೇಜಾರಾಗಿ ತತ್ವಪರಿಣಾಮವಾಗಿ ಬೀಡಿಯೊಂದನ್ನು ಹಚ್ಚಿಕೊಂಡು ದಮ್ಮೆಳೆದನು. ಸಡನ್ನಾಗಿ ದಮ್ಮೆಳೆದ ಪರಿಣಾಮವಾಗಿ ಕೆಮ್ಮಿನ ನಗೆಯೋ ನಗೆಯ ಕೆಮ್ಮೋ ಎಂದು ಸರಿಯಾಗಿ ಗುರುತಿಸಲಾಗದ ಪ್ರತಿಕ್ರಿಯೆಯೊಂದು ಹೊರಬಂದು ರಾಮಾಜೋಯಿಸರ ಬೈಗುಳದೊಡನೆ ಏಕವಾಯಿತು. ಐದಾರು ದಮ್ಮುಗಳಿಗೇ ಆ ಬೀಡಿಯ ಆಯಸ್ಸು ತೀರಿಹೋಗಲು ಇನ್ನೊಂದು ಬೀಡಿಗಾಗಿ ತಡಕಾಟ ಪ್ರಾರಂಭವಾಗಿ ಚಡಪಡಿಕೆಯಲ್ಲಿ ಪರ್ಯಾವಸಾನವಾಯಿತು.

ಕೊಟ್ಟ ಸಾಲ ವಾಪಸ್ ಕೊಡದಿದ್ದುದಕ್ಕೆ, ಹೀನಸುಳಿಯ ಎಮ್ಮೆ ರಾಸುಗಳನ್ನು ಸುಳಿಬೋಳಿಸಿ ಮಾರಿದ್ದಕ್ಕೆ, ಗೊಡ್ಡೆಮ್ಮೆಗಳನ್ನು ಗಬ್ಬದೆಮ್ಮೆಗಳೆಂದು ಟೋಪಿ ಹಾಕಿದ್ದಕ್ಕೆ, ಹೀಗೆ ನಾನಾ ಕಾರಣಗಳಿಗೆ ನಾನಾ ರೀತಿಯ ಬೈಗಳು, ಜಗಳ ಕಿತ್ತಾಟಗಳನ್ನು ಈಗ್ಗೆ ನಲವತ್ತು ವರುಷಗಳಿಂದ ಸಮೃದ್ಧವಾಗಿ ಕಂಡಿದ್ದ